ರುತ್ತಾರೆ. ಹಾಗೂ ರಿಯಾಯಿತಿದಾರರು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಅರ್ಬಿಟ್ರೇಷನ್ ದಾವೆಯನ್ನು ಹೂಡಿದ್ದು, ಅದನ್ನು ದಿನಾಂಕ 03.05.2014 ರಂದು ಹಿಂಪಡೆದಿರುತ್ತಾರೆ.

(ಇ) ಮೆ. ಅಭಿಜಿತ ಟೋಲ್ ರೋಡ್ (ಕರ್ನಾಟಕ) ಲೀ. ರವರನ್ನು ಕಪ್ಪು ಪಟ್ಟಿಗೆ ಸೇರಿಸಿರುವ ವಿಷಯವು ಗಮನಕ್ಕೆ ಬಂದಿರುವುದಿಲ್ಲ.

(ಈ) ಈ ಬಗ್ಗೆ ರಿಯಾಯಿತಿದಾರರಿಗೆ ಮಾಹಿತಿ ನೀಡಿ ಕಾಮಗಾರಿ ಪ್ರಗತಿಯನ್ನು ಚುರುಕುಗೊಳಿಸಲು ಹಲವಾರು ಸಭೆಗಳನ್ನು ನಡೆಸಿ ಸೂಕ್ತ ಸಲಹೆ ಮತ್ತು ಮಾರ್ಗೋಪಾಯಗಳನ್ನು ನೀಡಲಾಗಿರುತ್ತದೆ.

(ಉ) ರಿಯಾಯಿತಿದಾರರು 06.01.2014 ರಿಂದ ಪುನಃ ಚುರುಕುಗೊಳಿಸಿ ಕಾಮಗಾರಿ ಪ್ರಾರಂಭಿಸಿರುತ್ತಾರೆ.

ಸದರಿ ಯೋಜನೆಗೆ ಅಗತ್ಯವಿರುವ ಹೆಚ್ಚುವರಿ ಭೂಮಿ ಒಟ್ಟು 108 ಎಕರೆ 28 ಗಂಟೆ ಭೂ ಸ್ವಾಧೀನ ಅವಶ್ಯಕತೆ ಇದ್ದು, ಪ್ರಕ್ರಿಯೆ ಪ್ರಗತಿಯಲ್ಲಿದೆ.

ಬಸ್ ನಿಲ್ದಾಣಕ್ಕೆ ಮೇಲ್ಸೇತುವೆ ನಿರ್ಮಾಣ

949 (1658); ಶ್ರೀ ಮಂಜು ಎ. (ಅರಕಲಗೂಡು)

(ಅ) ಹಾಸನ ನಗರದ ಹೊಸ ಬಸ್‌ನಿಲ್ದಾಣದಿಂದ ರೇಲ್ವೆ ಹಳಿ ಮಾರ್ಗವಾಗಿ ನಗರದ ಒಳಭಾಗಕ್ಕೆ ಪ್ರವೇಶಿಸುವ ರಸ್ತೆ ಅತ್ಯಂತ ತ್ರಾಸದಾಯಕವಾಗಿದ್ದು ವಾಹನಗಳ ಸಂಚಾರಕ್ಕೆ ಮೇಲ್ಸೇತುವೆ ನಿರ್ಮಾಣ ಮಾಡಬೇಕಾಗಿರುವುದು ಅತಿ ಅವಶ್ಯಕ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಮೇಲ್ಸೇತುವೆ ನಿರ್ಮಾಣ ಮಾಡಲು ಸರ್ಕಾರಕ್ಕೆ ಇಚ್ಛೆ ಇದೆಯೇ;

(ಇ) ಹಾಗಿದ್ದಲ್ಲಿ, ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ. ಹೆಚ್. ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು)

(ಅ) ಬಂದಿದೆ.

(ಆ) ಇದೆ.

(ಇ) ಹಾಸನ ನೂತನ ಬಸ್ ನಿಲ್ದಾಣದ ಹತ್ತಿರ ಹಾದು ಹೋಗಿರುವ ಹಾಸನ–ಮಂಗಳೂರು ರೈಲ್ವೇ ಲೇನಿಗೆ ಅಡ್ಡಲಾಗಿ ಬಾಗಲಕೋಟೆ–ಬಿಳಿಗಿರಿರಂಗನಬೆಟ್ಟ ರಾಜ್ಯ ಹೆದ್ದಾರಿ ಸಂಖ್ಯೆ–57ರ ರಸ್ತೆಯು ಹೌದು ಹೋಗಿದ್ದು ಸದರಿ ಸ್ಥಳದಲ್ಲಿ ಹಾಲಿ ಇರುವ ಲೆವೆಲ್ ಕ್ರಾಸಿಂಗ್ ನಂ–3 ಕಿ.ಮೀ. 1/600–700ಗೆ ಬದಲಾಗಿ ಮೇಲ್ಸೇತುವೆ (ಆರ್.ಓ.ಬಿ) ನಿರ್ಮಿಸುವ ಪ್ರಸ್ತಾವನೆಗೆ ರೈಲ್ವೆ ಇಲಾಖೆ ಹಾಗೂ ರಾಜ್ಯ ಸರ್ಕಾರವು ಶೇ. 50:50ರ ಅನುಪಾತದ ಆರ್ಥಿಕ ಹೊಣೆಯಡಿಯಲ್ಲಿ ರೂ. 34.20 ಕೋಟಿಗಳ ಅಂದಾಜಿನಲ್ಲಿ ನಿರ್ಮಿಸಲು ಒಪ್ಪಿಗೆ ನೀಡಿದೆ. ಸದರಿ ಮೇಲ್ಸೇತುವೆ (ಆರ್.ಓ.ಬಿ.) ನಿರ್ಮಾಣಕ್ಕೆ ಸಂಬಂಧಿಸಿದಂತೆ ಪ್ರಸ್ತಾವನೆಯು ರೈಲ್ವೆ ಇಲಾಖೆಯ ಮುಂದಿದ್ದು ವಿಸ್ತೃತವಾದ ವಿವರಗಳೊಂದಿಗೆ ನೀಲಿ ನಕ್ಷೆಗಳನ್ನು (ಜಿ.ಎ.ಡಿ.) ತಯಾರಿಸಲು ಸ್ಥಳದಲ್ಲಿ ಸರ್ವೆ ಕೆಲಸಗಳನ್ನು ರೈಲ್ವೆ ಇಲಾಖೆಯು ಕೈಗೊಂಡಿದೆ.

ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ

950 (410); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ. (ಮಂಗಳೂರು ನಗರ ಉತ್ತರ)

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆಯನ್ವಯ ಎಷ್ಟು ಕುಟುಂಬಗಳಿಗೆ ಪರಿಹಾರ ಧನವನ್ನು ವಿತರಿಸಲಾಗಿದೆ? ಹಾಗೂ ವಿತರಿಸಲಾದ ಮೊತ್ತ ಎಷ್ಟು; (ವಿವರ ನೀಡುವುದು)